ಓ.ಎಸ್. 334/2017
ಡಿ.ಡಬ್ಲ್ಯೂ-2

ದಿನಾಂಕ: **08.09.2025**

ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

<u>ಪಾಟೀ ಸವಾಲುಃ **8** ನೇ ಪ್ರತಿವಾದಿ ಪರ ಶ್ರೀ ಜಿ.ಬಿ.ಹೆಚ್. ವಕೀಲರಿಂದಃ</u>

ನಾನು ಜನ್ಮತಃ ಹುಣಸವಾಡಿ ಗ್ರಾಮದಲ್ಲಿಯೇ ವಾಸವಾಗಿರುತ್ತೇನೆ. ಈ ದಾವೆ ನಡೆಯುತ್ತಿರುವಂತಹ ಸರ್ವೆ ನಂ. 98/1 ರಲ್ಲಿನ 5 ಎಕರೆ 26 ಗುಂಟೆ ಜಮೀನನ್ನು ನಾನು ನೋಡಿರುವುದಿಲ್ಲ. ನಾನು ಸರ್ವೆ ನಂ. 98/4 ರಲ್ಲಿನ ನನ್ನ ಸ್ವಯಾರ್ಜಿತ ಜಮೀನಿನ ಬಗ್ಗೆ ಸಾಕ್ಷ್ಯ ನುಡಿಯಲು ಬಂದಿರುತ್ತೇನೆ. ಸದರಿ ಜಮೀನನ್ನು ನಾನು ನಾಗಣ್ಣನವರಿಂದ ಖರೀದಿ ಮಾಡಿರುತ್ತೇನೆ. ಸದರಿ ಜಮೀನು ನಾಗಣ್ಣನವರಿಗೆ ಹೇಗೆ ಬಂದಿತ್ತು ಎಂದು ನನಗೆ ಗೊತ್ತಿರುವುದಿಲ್ಲ. ನಾಗಣ್ಣ ನನಗೆ ಬರೆದುಕೊಟ್ಟಿರುವ ಕ್ರಯ ಪತ್ರದಲ್ಲಿ ಸರ್ವೆ ನಂ 98/4 ಎಂದು ನಮೂದು ಮಾಡಿರುತ್ತಾರೆ. ಸದರಿ ಕ್ರಯ ಪತ್ರವನ್ನು ನಾನು ಓದಿ ತಿಳಿದುಕೊಂಡಿರುತ್ತೇನೆ. ನಾನು ಖರೀದಿ ಮಾಡಿರುವ ಕ್ರಯ ಪತ್ರದಲ್ಲಿ ಪೂರ್ವಕ್ಕೆ ನಾಗಣ್ಣನವರ ಜಮೀನು, ಪಶ್ಚಿಮಕ್ಕೆ-ಹರೀಶ್ ಬಾಬು ಮತ್ತು ಕೃಷ್ಣಮೂರ್ತಿಯವರ ಜಮೀನು, ಉತ್ತರಕ್ಕೆ-ಸಿದ್ದಲಿಂಗಯ್ಯ, ದಕ್ಷಿಣಕ್ಕೆ ಲಿಂಗಮ್ಮನವರ ಜಮೀನು ಎಂದು ನಮೂದು ಮಾಡಿರುತ್ತಾರೆ. ಆದರೆ ನಾನು ಖರೀದಿ ಮಾಡಿರುವ ಜಮೀನನ್ನು ಹೊರತು ಪಡಿಸಿ 98/1 ಎ2 ರಲ್ಲಿ ನನಗೆ ಖಾತೆ ಮಾಡಿ , ಪೋಡಿ ಮಾಡಿರುತ್ತಾರೆ. ಸರ್ವೆ ನಂ. 98/1 ಎ2 ರಲ್ಲಿ ನನ್ನ ಹೆಸರಿಗೆ ಮಾಡಿರುವ ಖಾತೆ ಮತ್ತು ಪೋಡಿ ತಪ್ಪಾಗಿರುತ್ತದೆ ಎಂದರೆ ಸರಿ. ನನಗೆ ಸೇರಿದ ಜಮೀನು 98/4 ರಲ್ಲಿರುತ್ತದೆ ಎಂದರೆ ಸರಿ.

**2.** ನನಗೆ ಕ್ರಯ ಪತ್ರ ಬರೆದುಕೊಟ್ಟಂತಹ ನಾಗಣ್ಣನಿಗೆ ಸರ್ವೆ ನಂ 98/1 ಎ2 ಯಾವುದೇ ಹಕ್ಕು ಇರಲಿಲ್ಲ ಎಂದರೆ ಸರಿ. ಸರ್ವೆ ನಂ. 98/1 ಚಿಕ್ಕರಾಮಯ್ಯ ಮತ್ತು ಅವರ

ಮಕ್ಕಳಿಗೆ ಸೇರಿದ ಜಮೀನು ಎಂದರೆ ನನಗೆ ಗೊತ್ತಿರುವುದಿಲ್ಲ. ಚಿಕ್ಕರಾಮಯ್ಯ ಮಗಳು ಶಾರದಮ್ಮರವರನ್ನು ನಾನು ನೋಡಿರುತ್ತೇನೆ. ಸರ್ವೆ ನಂ. 98/1 ರಲ್ಲಿ 8 ನೇ ಪ್ರತಿವಾದಿ ಶಾರದಮ್ಮ , ಅವರ ಗಂಡ ಮತ್ತು ಮಕ್ಕಳು ದೇವಸ್ಥಾನ ಕಟ್ಟಿರುತ್ತಾರೆ ಎಂದರೆ ಸರಿ. ಸದರಿ ದೇವಸ್ಥಾನಕ್ಕೆ 8 ನೇ ಪ್ರತಿವಾದಿಯ ಮಗ ರಂಗನಾಥ ಪೂಜಾರಿಯಾಗಿರುತ್ತಾರೆ ಎಂದರೆ ಸರಿ.

**3.** ಸರ್ವೆ ನಂ. 98/1 ರಲ್ಲಿ ಚಿಕ್ಕರಾಮಯ್ಯ ತೀರಿಕೊಂಡಾಗಿನಿಂದಲೂ 8 ನೇ ಪ್ರತಿವಾದಿ ಸ್ವಾಧೀನಾನುಭವದಲ್ಲಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ದೇವಸ್ಥಾನದ ಅಕ್ಕ-ಪಕ್ಕದಲ್ಲಿರುವಂತಹ ಜಮೀನಿನಲ್ಲಿ 8 ನೇ ಪ್ರತಿವಾದಿ ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿ. 1 ನೇ ವಾದಿಯನ್ನು ನಾನು ನೋಡಿರುವುದಿಲ್ಲ. ಸರ್ವೆ ನಂ. 98/1 ಎ 2 ರಲ್ಲಿ ಗಂಗಮ್ಮ 30 ಗುಂಟೆ ಜಮೀನಿನಲ್ಲಿ ಸ್ವಾಧೀನದಲ್ಲಿರುತ್ತಾರೆಂದು ನಾನು ಹೇಳಿಕೆ ಕೊಟ್ಟಿರುವುದಿಲ್ಲ. ಸಾಕ್ಷಿ ಮುಂದುವರೆದು ಅವರು ಇದ್ದರು ಎಂದು ಉತ್ತರಿಸಿರುತ್ತಾರೆ. ಸದರಿ ಜಮೀನಿನ ಚಕ್ಕುಬಂಧಿ ಮತ್ತು ವಿಸ್ತೀರ್ಣ ಹೇಳಲು ಆಗುವುದಿಲ್ಲ. ದೇವಸ್ಥಾನ ಮತ್ತು ದೇವಸ್ಥಾನಕ್ಕೆ ಹೊಂದಿಕೊಂಡಿರುವ ಜಮೀನು ಸುಮಾರು 5 ಎಕರೆ 16 ಗುಂಟೆ ವಿಸ್ತೀರ್ಣ ಇರುತ್ತದೆ ಎಂದರೆ ಸರಿ. ಸದರಿ ಜಮೀನು ಚಿಕ್ಕರಾಮಯ್ಯನವರಿಗೆ ಸೇರಿದ್ದು ಅವರ ಜೀವಿತ ಕಾಲದಲ್ಲಿ ಅವರೇ ಸ್ವಾಧೀನದಲ್ಲಿದ್ದರು ಎಂದರೆ ಸರಿ. ಚಿಕ್ಕರಾಮಯ್ಯನವರಿಗೆ ಗಂಡು ಮಕ್ಕಳಿರುವುದಿಲ್ಲ ಎಂದರೆ ಸರಿ. ಸದರಿ 5 ಎಕರೆ 16 ಗುಂಟೆ ಜಮೀನನ್ನು ಚಿಕ್ಕರಾಮಯ್ಯ ತೀರಿಕೊಂಡ ನಂತರ ಅವರ ಮೂರು ಜನ ಹೆಣ್ಣುಮಕ್ಕಳಾದ ರಾಮಕ್ಕ, ಶಾರದಮ್ಮ ಮತ್ತು ಗಂಗಮ್ಮ ಅನುಭವಿಸುತ್ತಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ.

**4.** ನಾಗಣ್ಣ ನನಗೆ ಮಾರಾಟ ಮಾಡಿದ ಜಮೀನು ಅವರಿಗೆ ಹೇಗೆ ಬಂದಿರುತ್ತದೆ ಎಂದು ನಾನು ದಾಖಲೆಗಳನ್ನು ಪಡೆದುಕೊಂಡಿರುವುದಿಲ್ಲ. ಸರ್ವೆ ನಂ. 98/1, ಸರ್ವೆ ನಂ. 98/1 ಎ1 ಮತ್ತು ಸರ್ವೆ ನಂ. 98/1 ಎ2 ರಲ್ಲಿ ಯಾರಿಗೆ ಎಷ್ಟು ಜಮೀನು ಇರುತ್ತದೆ ಮತ್ತು ಯಾರು ಸ್ವಾಧೀನದಲ್ಲಿರುತ್ತಾರೆಂದು ನನಗೆ ಗೊತ್ತಿರುವುದಿಲ್ಲ.

**5.** ಪಹಣಿಗಳಲ್ಲಿ ವ್ಯತ್ಯಾಸ ಆಗಿರುವುದರಿಂದ ನಾನು, ವಾದಿಗಳು, 1 ರಿಂದ 3, 5 ರಿಂದ 7 ನೇ ಪ್ರತಿವಾದಿಗಳು ಎಲ್ಲಾ ಮಾತನಾಡಿಕೊಂಡು ಈ ದಾವೆಯನ್ನು ಹೂಡಿರುತ್ತೇವೆ ಎಂದರೆ ಸರಿ. ನನ್ನ , ವಾದಿಗಳು, 1 ರಿಂದ 3, 5 ರಿಂದ 7 ನೇ ಪ್ರತಿವಾದಿಗಳ ಮಧ್ಯೆ ಯಾವುದೇ ವ್ಯಾಜ್ಯ ಮತ್ತು ವೈಷಮ್ಯ ಇರುವುದಿಲ್ಲ ಎಂದು ಸೂಚಿಸುವುದು ಸರಿಯಲ್ಲ. 8 ನೇ ಪ್ರತಿವಾದಿಗೆ ಸೇರಿದಂತಹ ಆಸ್ತಿಯನ್ನು ಅಕ್ರಮವಾಗಿ ಪಡೆದುಕೊಳ್ಳುವ ಉದ್ದೇಶದಿಂದ ನಾವೆಲ್ಲರೂ ಶಾಮೀಲಾಗಿ ಈ ದಾವೆಯನ್ನು ಹೂಡಿರುತ್ತೇವೆ ಎಂದು ಸೂಚಿಸುವುದು ಸರಿಯಲ್ಲ. ಸಾಕ್ಷಿ ಮುಂದುವರೆದು ಅದಕ್ಕೆ ನನಗೆ ಸಂಬಂಧವಿರುವುದಿಲ್ಲ ಎಂದು ಉತ್ತರಿಸಿರುತ್ತಾರೆ.

**6.** ಗಂಗಮ್ಮನವರಿಗೆ 30 ಗುಂಟೆ ಜಮೀನು ಸೇರಿರುತ್ತದೆ ಎಂಬುದಕ್ಕೆ ನಾನು ಯಾವುದೇ ದಾಖಲೆಯನ್ನು ನೋಡಿರುವುದಿಲ್ಲ. ಗಂಗಮ್ಮನವರಿಗೆ 30 ಗುಂಟೆ ಜಮೀನು ಹೇಗೆ ಬಂದಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ಸರ್ವೆ ನಂ. 98/1 ಎ1 ಮತ್ತು ಸರ್ವೆ ನಂ. 98/1 ಎ2 ಸಂಪೂರ್ಣವಾಗಿ 8 ನೇ ಪ್ರತಿವಾದಿಗೆ ಸೇರಿರುತ್ತವೆ ಎಂದರೆ ನನಗೆ ಗೊತ್ತಿರುವುದಿಲ್ಲ.

**7.** 8 ನೇ ಪ್ರತಿವಾದಿಗೆ ಸೇರಿರುವ ಆಸ್ತಿಯನ್ನು ಅಕ್ರಮವಾಗಿ ಪಡೆದುಕೊಳ್ಳುವ ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯಾದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ. ಹೇ. ಕೇ. ಸರಿ. ಇದೆ.

ಸಹಿ/-

(ಶ್ರೀ ಅಮರನಾಥ ಬಿ.ಎನ್)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಮಧುಗಿರಿ